ಸರ್ವೋದಯ ಡೆವಲಪರ್ಸ್ ಎನ್ನುವ ಎರಡು ಕಂಪನಿಗಳಿದ್ದು ನಂತರ ಇನ್ನೂ ಸಾಕಷ್ಟು ಕಂಪನಿಗಳು ಬಂದು ಆ ಊರಿನ ಎಲ್ಲಾ ಹೊಲಗಳನ್ನು ಖರೀದಿ ಮಾಡಿ ಗಣಿಗಾರಿಕೆಯನ್ನು ಶುರುಮಾಡಿದರು.

* * *

ಆ ಊರಿನ ಇಪ್ಪತ್ತೈದು-ಮೂವತ್ತೈದರ ಆಸುಪಾಸಿನ ಈಶ್ವರ, ರುದ್ರಸ್ವಾಮಿ, ಭೈರೇಶ್ ಕುಮಾರ್, ಗಂಗಾಧರ ಸ್ವಾಮಿ, ಮೂಲೆಮನೆ ಶಂಕರಮೂರ್ತಿ ಕಂಪನಿಗಳ ವಿರುದ್ಧ ಹೋರಾಟ ಮಾಡಿದರು. ನೂರರಿಂದ ನೂರೈವತ್ತು ಜನಗಳನ್ನು ತಮ್ಮ ನೇತೃತ್ವದಲ್ಲಿ ಡಿ.ಸಿ. ಅವರ ಬಳಿ ಕರೆದು ಕೊಂಡು ಹೋಗಿ 'ಯಾವುದೇ ಕಾರಣಕ್ಕೂ ಅಲ್ಲಿ ಗಣಿಗಾರಿಕೆಗೆ ಅವಕಾಶ ಕೊಡಬಾರದು. ಹಾಗೆ ಕೊಟ್ಟದ್ದೇ ಆದಲ್ಲಿ ನಾವು ಆಮರಣಾಂತ ಉಪವಾಸ ಕೂರುತ್ತೇವೆ. ಅಲ್ಲದೆ ನಮ್ಮದು ಪುರಾಣ ಕಾಲದಿಂದಲೂ ಪ್ರಸಿದ್ಧಿ ಹೊಂದಿರುವಂತಹದ್ದು. ಬೇಕಾದರೆ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಿ. ಅಲ್ಲದೆ ಗಣಿಗಾರಿಕೆಯಿಂದ ನಮ್ಮ ಊರಿನ ಆರೋಗ್ಯ ಹಾಳಾಗುತ್ತೆ. ನಮ್ಮ ಊರಿಗೆ ಯಾವುದೇ ನದಿಯ ಸೋರ್ಸ್ ಇಲ್ಲದಿರುವುದರಿಂದ ಕೃಷಿಕರು ಬೋರ್‌ನೀರನ್ನು ಅವಲಂಬಿಸಿಕೊಂಡಿದ್ದಾರೆ. ಒಂದ ಪಕ್ಷ ಹಾಗೇನಾದರೂ ಅವಕಾಶ ಕೊಟ್ಟಲ್ಲಿ ಕಂಪನಿಗಳು ಕೊರೆಯಿಸುವ ಬೋರ್‌ಗಳಿಂದಾಗಿ ನಮ್ಮ ಕೃಷಿಗೆ ಭಾರಿ ಪೆಟ್ಟು ಬೀಳುತ್ತದೆ' ಎಂದು ವಾದ ಮಾಡಿ ಬಂದರೂ ಯಾವುದೇ ಫಲ ಕಾಣಲಿಲ್ಲ.

ದಿನಗಳೆದಂತೆ ಕಂಪನಿಗಳು ಅವರನ್ನು ಕರೆಯಿಸಿ 'ನೀವು ನಮ್ಮ ಕಂಪನಿಗಳಲ್ಲಿ ಕೆಲಸಕ್ಕೆ ಸೇರಿಕೊಳ್ಳಿ. ನಿಮಗೆ ಐದು ಅಂಕೆಯ ಸಂಬಳ ಕೊಡುತ್ತೇವೆ' ಎಂದು ಮನವೊಲಿಸಿ ಈಶ್ವರ, ಭೈರೇಶ್ ಕುಮಾರ್, ಮೂಲೆಮನೆ ಶಂಕರಮೂರ್ತಿಯವರನ್ನು ಕೆಲಸಕ್ಕೆ ಸೇರಿಸಿಕೊಂಡರು. ಕಂಪನಿಯವರು ಗಂಗಾಧರ ಸ್ವಾಮಿಯನ್ನು ಕೊಲೆ ಮಾಡಿ ಕೇಸನ್ನು ಮುಚ್ಚಿ ಹಾಕಿದರು. ದಲಿತರ ರುದ್ರಸ್ವಾಮಿ ಊರು ಬಿಟ್ಟು ಓಡಿಹೋದ.

* * *

ಮೊದಲೆಲ್ಲಾ ಖಾಲಿ ಹೊಡೆಯುತ್ತಿದ್ದ ಆ ಊರಲ್ಲಿ ಈಗ ಮೈನಿಂಗ್ ವಾಹನಗಳು, ಮಶೀನ್‌ಗಳು ತುಂಬಿ ಹೋದವು. ಆ ಊರಿನ ಜನಗಳು ತಮ್ಮ ಹೊಲಗಳನ್ನು ಮಾರಿಕೊಂಡು ಈಗ ತಮ್ಮದೇ ಹೊಲಗಳಲ್ಲಿ ಯಾವು ಯಾವುದೋ ಕಂಪನಿಯವರು ಆರಂಭಿಸಿರುವ ಗಣಿಯಲ್ಲಿ ಕೆಲಸ ಮಾಡಿಕೊಂಡಿರುವರು. ಇಡೀ ಊರು ದೂಳಿನಿಂದ ತುಂಬಿ ಹೋಗಿ ಎಲ್ಲರ ಮುಖಗಳು ದೂಳಿನಿಂದ ಅದ್ದಿ ತೆಗೆದಂತಿವೆ. ಆ ಊರಿಗೆ ಊರೇ ಯಾವುದೋ ಅನ್ಯಗ್ರಹದಂತೆ ಭಾಸವಾಗುತ್ತಿದೆ. ಅಲ್ಲಿಯ ಜನಗಳು ಏಲಿಯನ್ ಪ್ರಪಂಚದ ಜೀವಿಗಳಂತೆ ವಿಚಿತ್ರ ರೀತಿಯಲ್ಲಿ ಕಾಣುತಿಹರು. ಗುಡ್ಡವನ್ನು ಅಗೆದು ಅಲ್ಲಿಯ ಕಲ್ಲುಗಳನ್ನು ಬಾಂಬ್ ಇಟ್ಟು ಸ್ಫೋಟಿಸಲಾಗಿ ಅಲ್ಲಿದ್ದ ತ್ರಿಶೂಲ ಚಿಲುಮೆ ನಾಶವಾಗಿದೆ. ಮೊದಲೆಲ್ಲಾ ಆಸ್ಪತ್ರೆಯೆಂದರೆ ತುಂಬಾ ದೂರ ಹೋಗಬೇಕಾಗಿದ್ದ ಆ ಊರಿನ ಜನ ಈಗ ತಮ್ಮ ಕೆಮ್ಮುದಮ್ಮು, ಅಸ್ತಮಾ, ಕ್ಯಾನ್ಸರ್‌ನಂತಹ ರೋಗಗಳನ್ನು ಅಲ್ಲಿಯೇ ಕಂಪನಿಯವರು ಕಟ್ಟಿಸಿರುವ ಆಸ್ಪತ್ರೆಗಳಲ್ಲಿ ತೋರಿಸಿಕೊಳ್ಳುತ್ತಾರೆ.

* * *

ಸಣ್ಣ ಶಿವನಂಜಯ್ಯನ ಹೆಂಡತಿಗೆ ಹುಚ್ಚು ಹಿಡಿದು ಸತ್ತು ಹೋದಳು ಇತ್ತೀಚೆಗೆ. ಮಗಳು ಕಲ್ಲಮ್ಮ ದಲಿತರ ಕೇರಿಯ ರುದ್ರಸ್ವಾಮಿ ಜೊತೆ ಓಡಿಹೋಗಿ, ಮದುವೆಯಾಗಿ ಮುಂಬೈಯಲ್ಲೋ, ಕೋಲ್ಕತ್ತದಲ್ಲೋ ಇದ್ದಾಳಂತೆ. ಶಿವನಂಜಯ್ಯ ಅದೇ ಊರಿನಲ್ಲಿ ಒಂದು ಗಣಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದಾನೆ. ಪೆನ್ನೇಶಿ ಮತ್ತು ಪದ್ದೇಶಿಯವರೂ ಸಹ ಗಣಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಾರೆ. ಅವರಿಬ್ಬರಿಗೂ ಮದುವೆಯಾಗಿ ಈಗ ಅವರ ಹೆಂಡತಿಯರು ಬಾಣಂತನಕ್ಕೆಂದು ತವರಿಗೆ ಹೋಗಿದ್ದಾರೆ.

* * *

ಈಗ ಆ ಜಿಂಕೆಯಂತಿದ್ದ ಲೋಹದ ಪ್ರಾಣಿ ಏನಾಯ್ತು ಎಂದು ಗೊತ್ತಿಲ್ಲ.

* * *

ಪೊಲೀಸಿನವರು ಮತ್ತೆ ಎಂದೂ ಸಣ್ಣ ಶಿವನಂಜಯ್ಯನನ್ನು ಹುಡುಕಿಕೊಂಡು ಬರಲಿಲ್ಲ. ಆ ಊರಿಗೆ ಇದ್ದಂತಹ ನೆನಪುಗಳು ಗಣಿದೂಳಿನಲ್ಲಿ ಮುಚ್ಚಿ ಹೋಗಿವೆ.

●

